ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರ: 1628/2018

ಚಾಸಾ: 1 ಪ್ರಾಸಾ:1

ದಿನಾಂಕ: 04.09.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಹರೀಶ್ ಆರ್ |
| ತಂದೆಯ ಹೆಸರು | : | ರಾಮ ನಾಯ್ಕ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಪಿ ಎಸ್ ಐ |
| ವಾಸ ಸ್ಥಳ | : | ಗಂಗೊಳ್ಳಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು ದಿ: 11-10-2017 ರಿಂದ 26-08-2020ರವರೆಗೆ ಕುಂದಾಪುರದ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 26-10-2017 ರಂದು ನಾನು ಸಿಬ್ಬಂದಿಯಾದ ಚಾಸಾ-8ರವರೊಂದಿಗೆ ಇಲಾಖಾ ಜೀಪಿನಲ್ಲಿ ವಿಶೇಷ ರಾತ್ರಿ ರೌಂಡ್ಸ್ ಕರ್ತವ್ಯದಲ್ಲಿ ಇದ್ದಾಗ ದಿ: 27-10-2017ರ ಮುಂಜಾನೆ 4-30 ಗಂಟೆಗೆ ಬಾತ್ಮಿದಾರರು ಕರೆ ಮಾಡಿ ಆನಗಳ್ಳಿ ವಾರಾಹಿ ನದಿಯಿಂದ ಅಕ್ರಮವಾಗಿ ಮರಳು ಸಾಗಾಟ ಮಾಡಿಕೊಂಡು ಮಾರ್ಕೋಡು ಕಡೆಗೆ ಬರುತ್ತಿದ್ದಾರೆ ಎಂದು ತಿಳಿಸಿದ ಮೇರೆಗೆ ನಾನು ಕೂಡಲೇ ಅಲ್ಲಿಗೆ ತೆರಳಿ ಕಳಂಜೆ ಗ್ರಾಮದ ಅಂಗನವಾಡಿ ಬಳಿ ನನ್ನ ಇಲಾಖಾ ಜೀಪನ್ನು ನಿಲ್ಲಿಸಿ ಅಲ್ಲಿ ಮರೆಯಲ್ಲಿ ನಿಂತು ನೋಡುತ್ತಿದ್ದಾಗ ಮುಂಜಾನೆ ಸಮಯ 4-50ರ ಸುಮಾರಿಗೆ ಕೆದೂರಿನಿಂದ ಒಂದು ವಾಹನ ಬರುತ್ತಿದ್ದು ಅದನ್ನು ನಿಲ್ಲಿಸುವಂತೆ ನಾವು ಅಲ್ಲಿಂದಲೇ ಟಾರ್ಚ್ ಲೈಟ್ ಬಿಟ್ಟು ಸೂಚನೆ ನೀಡಿದಾಗ ವಾಹನವನ್ನು ಚಾಲಕ ನಿಲ್ಲಿಸಿದ್ದು, ನಂತರ ನಾನು ಮತ್ತು ಸಿಬ್ಬಂದಿಯವರಾದ ಚಾಸಾ-8ರವರು ಮುಂದಕ್ಕೆ

ನಡೆದುಕೊಂಡು ಹೋದಾಗ ಆತ ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ಅಲ್ಲಿ ಪಕ್ಕದ ಹಾಡಿಗೆ ಓಡಿ ಹೋಗಿರುತ್ತಾನೆ.

ನಂತರ ವಾಹನ ನೋಡಲಾಗಿ ಕೆಎ-20-ಸಿ-3817 ಗೂಡ್ಸ್ ವಾಹನವಾಗಿದ್ದು, ಅದನ್ನು ಪರಿಶೀಲಿಸಲಾಗಿ ವಾಹನದಲ್ಲಿ ಮರಳು ತುಂಬಿರುವುದು ಕಂಡು ಬಂದಿರುತ್ತದೆ. ನಂತರ ಚಾಸಾ-8ರವರಿಗೆ ಇಬ್ಬರು ಸ್ಥಳೀಯರನ್ನು ಪಂಚರನ್ನಾಗಿ ಕರೆ ತರುವಂತೆ ಸೂಚಿಸಿದ್ದು, ಅದರಂತೆ ಚಾಸಾ-3 ಮತ್ತು 4ರವರು ಕೂಡಲೇ ಸ್ಥಳಕ್ಕೆ ಬಂದಿದ್ದು ಅವರ ಸಮಕ್ಷಮ ಮರಳು ತುಂಬಿದ ವಾಹನವನ್ನು ಬೆಳಿಗ್ಗೆ 5 ರಿಂದ 6 ಗಂಟೆಯ ಸಮಯದಲ್ಲಿ ಮಹಜರು ಮುಖೇನ ಸ್ವಾಧೀನಪಡಿಸಿಕೊಂಡು 6-15ಕ್ಕೆ ಠಾಣೆಗೆ ಹಾಜರಾಗಿ ವಿವರವಾದ ವರದಿಯನ್ನು ತಯಾರಿಸಿ 6-30 ಗಂಟೆಗೆ ಠಾಣಾ ಅಪರಾಧ ಕ್ರಮಾಂಕ 270/2017 ರಂತೆ ಪ್ರಕರಣವನ್ನು ದಾಖಲಿಸಿ ಪ್ರ.ವ. ವರದಿ ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ನಿವೇಧಿಸಿಕೊಂಡಿರುತ್ತೇನೆ.

ಅದೇ ದಿನ ತನಿಖೆಯನ್ನು ಮುಂದುವರೆಸಿ ವಶಕ್ಕೆ ಪಡೆದ ವಾಹನವನ್ನು ಸ್ವತ್ತು ಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತೇನೆ. ನಂತರ ಸದ್ರಿ ಟೆಂಪೋದಲ್ಲಿ ಇದ್ದ ಮರಳಿನ ಬಗ್ಗೆ ವರದಿಯನ್ನು ನೀಡುವರೇ ಹಿರಿಯ ಭೂ ವಿಜ್ಞಾನಿ ಉಡುಪಿ ಜಿಲ್ಲೆ ರವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ಅದೇ ದಿನ ಆರೋಪಿಯ ಪತ್ತೆ ಬಗ್ಗೆ ಹುಡುಕಾಡಿ ಆರೋಪಿಯ ಪತ್ತೆಯಾಗಿರುವುದಿಲ್ಲ.

ದಿಃ 28-10-2017 ರಂದು ಪುನಃ ಆರೋಪಿಯ ಪತ್ತೆಗೆ ಆನಗಳ್ಳಿ ಮತ್ತು ಕಳಂಜೆ ಭಾಗದಲ್ಲಿ ಬಾತ್ಮಿದಾರರನ್ನು ಸಂಪರ್ಕಿಸಿ ಯಾವುದೇ ಮಾಹಿತಿ ಬಂದರೆ ವರದಿ ಮಾಡುವಂತೆ ಸೂಚಿಸಿರುತ್ತೇನೆ. ದಿಃ 23-11-2017 ರಂದು ಆರೋಪಿಗೆ ನಿರೀಕ್ಷಣಾ ಜಾಮೀನನ್ನು ನೀಡಿದ್ದು 11-30 ಕ್ಕೆ ಆತ ಠಾಣೆಗೆ ಹಾಜರಾಗಿ ಬೆಳಿಗ್ಗೆ 11-30 ರಿಂದ 12 ಗಂಟೆಯವರೆಗೆ ಆರೋಪಿಯದಸ್ತಗಿರಿ ಕ್ರಮವನ್ನು ಜರುಗಿಸಿರುತ್ತೇನೆ. ನಂತರ ಆರೋಪಿಯ ಸ್ವ ಇಚ್ಛಾ ಹೇಳಿಕೆ ಪಡೆದಿರುತ್ತೇನೆ. ಅದರ ಆಧಾರದ ಮೇಲೆ ಆರೋಪಿ ತೋರಿಸಿಕೊಟ್ಟಂತೆ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಚಾಸಾ-5 ಮತ್ತು 6ರವರ ಸಮಕ್ಷಮ ಮಧ್ಯಾಹ್ನ 12-50 ರಿಂದ 01-50ರವರೆಗೆ ಸ್ಥಳ ಪಂಚನಾಮೆ ಜರುಗಿಸಿರುತ್ತೇನೆ. ಅದೇ ದಿನ ದಾಳಿಯ ಸಮಯದಲ್ಲಿ ಇದ್ದಂತಹ ಚಾಸಾ-8 ಮತ್ತು ಲೊಕೇಶ್-ಚಾಸಾ-9ರವರ ಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಸಾಕ್ಷಿದಾರರಾದ ಚಾಸಾ-2 ರಿಂದ 4ರವರನ್ನು ಠಾಣೆಗೆ ಕರೆಯಿಸಿ ಅವರ ಹೇಳಿಕೆ ಪಡೆದಿರುತ್ತೇನೆ.

ದಿಃ 29-11-2017 ರಂದು ಆರೋಪಿ ಠಾಣೆಗೆ ಹಾಜರಾಗಿ ಪ್ರಕರಣದಲ್ಲಿ ಮರಳನ್ನು ಲೋಡ್ ಮಾಡಲು ಬಳಸಿದ ಕೇಸರಿ ಬಣ್ಣದ ಫೈಬರ್ ಬುಟ್ಟಿ -1, ತಿಳಿ ನೀಲಿ ಬಣ್ಣದ ಫೈಬರ್ ಬುಟ್ಟಿ -1, ಮರದ ಹಿಡಿ ಇರುವ ಕಬ್ಬಿಣದ ಹಾರೆ-2 ನ್ನು ಹಾಜರುಪಡಿಸಿದ್ದು, ಪಂಚರಾದ ಚಾಸಾ-5ರವರ ಸಮಕ್ಷಮ ಪಂಚನಾಮೆಯನ್ನು 5-10 ರಿಂದ 5-45ರವರೆಗೆ ವಶಕ್ಕೆ ಪಡೆದು ಠಾಣಾ ಮಾಲು ಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇಧಿಸಿಕೊಂಡಿರುತ್ತೇನೆ. ಘಟನಾ ಸ್ಥಳದಲ್ಲಿ ಮಹಜರು ಮಾಡುವ ಸಮಯದಲ್ಲಿ ಪೋಟೋವನ್ನು ತೆಗೆದಿರುತ್ತೇವೆ.

ದಿಃ 23-01-2018 ರಂದು ತನಿಖೆಯನ್ನು ಮುಂದುವರೆಸುತ್ತಾ ನ್ಯಾಯಾಲಯದಿಂದ ಟೆಂಪೋ ಬಿಡುಗಡೆ ಮಾಡುವಂತೆ ಆದೇಶ ನೀಡಿದ್ದು ನಂತರ ಆರೋಪಿಯಿಂದ ಇಂಡಿಮಿನಿಟಿ ಬಾಂಡ್ ಕೊಟ್ಟು ಬಿಟ್ಟು ಕೊಟ್ಟಿರುತ್ತೇನೆ. ದಿಃ 12-04-2018 ರಂದು ಚಾಸಾ-7 ರವರಿಂದ ಮರಳಿನ ಬಗ್ಗೆ ವರದಿ ಹಾಗೂ ಮರಳನ್ನು ತೆಗೆದ ಜಾಗದಲ್ಲಿ ಮರಳನ್ನು ತೆಗೆಯಬಾರದು ಎಂದು ಇರುವ ಸರಕಾದ ಆದೇಶವನ್ನು ತಿಳುವಳಿಕೆ ಪತ್ರದಲ್ಲಿ ನಮಗೆ ನೀಡಿದ್ದು ಅದನ್ನು ಕಡತಕ್ಕೆ ಅಳವಡಿಸಿರುತ್ತೇನೆ. ಆರೋಪಿತರ ವಿರುದ್ದ ಈ ಹಿಂದೆ ದಾಖಲಾಗಿದ್ದ ಪ್ರ.ವ.ವರದಿಯಲ್ಲಿ ಎಂ ಎಂ ಆರ್ ಡಿಯನ್ನು ಹೊರತುಪಡಿಸಿ ಕಲಂ 379 ಐಪಿಸಿರಡಿಯಲ್ಲಿ ಆರೋಪಿ ವಿರುದ್ದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿವೇಧನೆ, ದಿಃ 27-10-2017ರ ಸ್ಥಳ ಪಂಚನಾಮೆ, ದಿಃ 23-11-2017ರ ಆರೋಪಿ ದಸ್ತಗಿರಿ ಪಂಚನಾಮೆ, ಆರೋಪಿ ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆ, ದಿಃ 29-11-2017ರ ಸ್ವತ್ತು ಸ್ವಾಧೀನತಾ ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1 ರಿಂದ 4 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 4(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿ, ದಿಃ 21-12-2017, ದಿಃ 16-01-2018ರ ಹಿರಿಯ ಭೂ ವಿಜ್ಞಾನಿಗಳ ಕಚೇರಿಯಿಂದ ಪಡೆದ ಪತ್ರಗಳು, ವಾಹನವನ್ನು ಆರೋಪಿಗೆ ಬಿಟ್ಟು ಕೊಟ್ಟ ರಶೀದಿ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-5 ರಿಂದ 8 ಎಂದು, ಸಾಕ್ಷಿ ಸಹಿಗಳನ್ನು ನಿಪಿ-5(ಎ) ರಿಂದ 8(ಎ) ಎಂದು ಗುರುತಿಸಲಾಯಿತು. ಸ್ಥಳದ 2 ಪೋಟೋ ಹಾಗೂ ವಾಹನದ 1 ಪೋಟೊವನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-9 ರಿಂದ 11 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 2 ಫೈಬರ್ ಬುಟ್ಟಿ ಮತ್ತು 2 ಮರದ ಹಿಡಿ ಇರುವ ಹಾರೆಗಳನ್ನು ನೋಡಿ ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ1

ರಿಂದ 4 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ</u>**

ಈ ಪ್ರಕರಣದಲ್ಲಿ ದೂರು ನೀಡಿ ತನಿಖೆ ಮಾಡಿ ಅಂತಿಮ ದೋಷಾರೋಪಣಾ ಪಟ್ಟಿಯನ್ನು ನಾನೇ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಕರ್ತವ್ಯ ನಿರ್ವಹಿಸುತ್ತಿದ್ದಾಗ ಕ್ರೈಂ ಇನ್ಸಪೆಕ್ಟರ್ ಇದ್ದು ಅವರ ಹೆಸರು ನೆನಪಿಲ್ಲ. ಆ ಸಮಯದಲ್ಲಿ ಕುಂದಾಪುರದ ವೃತ್ತ ನಿರೀಕ್ಷಕರು ಮತ್ತು ಡಿ ವೈ ಎಸ್ ಪಿ ರವರು ಇದ್ದರು. ಬೇರೆ ಅಧಿಕಾರಿಗಳಿಗೆ ಕಡತವನ್ನು ವಹಿಸಿದರೆ ಆರೋಪಿಯಿಂದ ಯಾವುದೇ ತನಿಖೆಯಲ್ಲಿ ವಿಚಾರಗಳು ಕಂಡು ಬರುವುದಿಲ್ಲ ಎಂದು ನಾನೇ ಅಂತಿಮ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮರಳು ಕಳ್ಳತನವಾದ ಸ್ಥಳದ ಸರ್ವೆ ನಂಬ್ರ ನನಗೆ ತಿಳಿದಿಲ್ಲ. ಸದ್ರಿ ಸರ್ವೆ ನಂಬ್ರನನ್ನು ಗುರುತಿಸುವ ಯಾವುದೇ ಕಾರ್ಯಚರಣೆ ನಾನು ಮಾಡಿಲ್ಲ. ಅದಕ್ಕೆ ಸಂಬಂಧಿಸಿದ ಯಾವುದೇ ಗೇಣಿ ಮತ್ತು ಪಹಣಿಯ ಪತ್ರಗಳನ್ನು ಪಡೆಯಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ.

ಸದ್ರಿ ಜಾಗದ ಸರ್ವೆ ನಂಬ್ರ ಯಾವುದು ಎಂದು ಪಂಚನಾಮೆ ಜರುಗಿಸುವ ಕಾಲಕ್ಕೆ ತಿಳಿದಿರಲಿಲ್ಲ. ಸದ್ರಿ ದಿನ ವಾಹನವನ್ನು ನೋಡುವ ವೇಳೆಗೆ 3 ಜನ ಪೊಲೀಸ್ ಸಿಬ್ಬಂದಿ ಇದ್ದರು. ವಾಹನವನ್ನು ನಿಲ್ಲಿಸಿ ಚಾಲಕನನ್ನು ಬಂಧಿಸಿದ ಅನುಭವ ಈ ಹಿಂದೆ ಇತ್ತು. ನನಗೆ ಮಾಹಿತಿ ಬರುವಾಗ ವಾಹನವನ್ನು ನಿಲ್ಲಿಸಿ ಚಾಲಕನನ್ನು ಹಿಡಿಯಬೇಕೆಂಬ ಇರಾಧೆ ಇತ್ತು. ಆದರೆ ಈ ಪ್ರಕರಣದಲ್ಲಿ ಚಾಲಕನನ್ನು ಹಿಡಿಯಲು ಪ್ರಯತ್ನಿಸಿದರೂ ಫಲಕಾರಿಯಾಗಿರುವುದಿಲ್ಲ. ಸದ್ರಿ ದಿನ ವಾಹನವನ್ನು ನೋಡಿದಾಗ ಬೆಳಿಗ್ಗೆ 4-55 ಆಗಿತ್ತು. ಆಗ ಕತ್ತಲು ಇರುತ್ತದೆ ಎಂದರೆ ಸಾಕ್ಷಿ ತಿಳಿ ಬೆಳಕು ಇರುತ್ತದೆ ಎಂದು ನುಡಿಯುತ್ತಾರೆ.

ನಿವೇಧನೆಯಲ್ಲಿ ಚಾಲಕನ ವಿವರನ್ನು ನಮೂದಿಸಿಲ್ಲ ಕಾರಣ ಆತ ಆಗ ಓಡಿ ಹೋಗಿರುತ್ತಾನೆ. ಸದ್ರಿ ವ್ಯಕ್ತಿಯ ಪೂರ್ವ ಪರಿಚಯವಿರಲಿಲ್ಲ. ಆದರೆ ಆತನ ಚಹರೆಯ ಗುರುತು ಇತ್ತು. ಆತನ ದೈಹಿಕ ಚಹರೆಯನ್ನು ಆವರೆಗೂ ಮಾಡಿರುವ ಯಾವುದೇ ಕಡತದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿವೇಧನೆ ಮತ್ತು ಪಂಚನಾಮೆಯಲ್ಲಿ ಆತನ ಯಾವುದೇ ವಿವರಗಳು ಇಲ್ಲ ಎಂದರೆ ಸರಿ. ನಾನು ರೌಂಡ್ಸ್ ಕರ್ತವ್ಯದಲ್ಲಿ ಇದ್ದಾಗ ಎಸ್ ಎಚ್ ಓ ಯಾರು ಪ್ರಭಾರದಲ್ಲಿ ಇದ್ದರು ಎಂದು ನನಗೆ ನೆನಪಿಲ್ಲ. ಸ್ಥಳದಿಂದ ಕುಂದಾಪುರ ಪೊಲೀಸ್ ಠಾಣೆ 2 ಕಿ.ಮೀ ದೂರವಿರುತ್ತದೆ. ಠಾಣೆಯೊಂದಿಗೆ ಸಂಪರ್ಕ ಕಲ್ಪಿಸಲು ನಿಸ್ತಂತು ಮತ್ತು ಮೊಬೈಲು ಪೋನ್ ಇತ್ತು. ಸದ್ರಿ ದಿನ ನಾನು ಸಿಬ್ಬಂದಿಯೊಂದಿಗೆ ರೌಂಡ್ಸ್ ಕರ್ತವ್ಯದಲ್ಲಿ ಇದ್ದೆ ಎಂದು ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ.

ಸ್ಥಳದಲ್ಲಿ ಒಂದು ಕಾಲು ಗಂಟೆ ಇದ್ದೇವು. ನಾವು ಈ ಪ್ರಕರಣದಲ್ಲಿ ಮೊದಲಿಗೆ ಮಾಡಿರುವ ದಾಖಲೆ ಪಂಚನಾಮೆ. 2 ಕಿ.ಮೀ ಅಂತರದಲ್ಲಿ ಇದ್ದರೂ ಕುಂದಾಪುರ ಪೋಲಿಸ್ ಠಾಣೆಗೆ ಸಂಪರ್ಕ ಕಲ್ಪಿಸಿ ದೂರು ದಾಖಲು ಮಾಡಲು ಪ್ರಯತ್ನಿಸಿಲ್ಲ ಎಂದರೆ ಸರಿ. ಆ ಸಮಯದಲ್ಲಿ ವಾಹನದಲ್ಲಿ ಯಾವುದೇ ವಾಹನಕ್ಕೆ ಸಂಬಂಧಿಸಿದ ದಾಖಲೆ ಸಿಕ್ಕಿರುವುದಿಲ್ಲ. ಠಾಣಾ ಸರಹದ್ದಿನಲ್ಲಿ ಓಡಿ ಹೋದ

ವ್ಯಕ್ತಿಯನ್ನು ಹಿಡಿಯಲು ಸರಹದ್ದಿನಲ್ಲಿ ಸೂಚಿಸಲು ಯಾವುದೇ ಅವಶ್ಯಕತೆ ಕಂಡು ಬಂದಿರುವುದಿಲ್ಲ. ಮರಳನ್ನು ನೋಡಿದಾಗ ಎಲ್ಲಿಂದ ತೆಗೆದಿರುವುದು ಎಂದು ಪ್ರತ್ಯಕ್ಷದರ್ಶಿ ಕರೆ ಮಾಡಿ ತಿಳಿಸಿರುತ್ತಾರೆ. ಸದ್ರಿ ಸ್ಥಳದಿಂದ 200 ಮೀಟರ್ ದೂರದಲ್ಲಿ ಮರಳನ್ನು ತೆಗೆದಿರುವುದನ್ನು ಖಚಿತಪಡಿಸಿಕೊಂಡಿರುತ್ತೇನೆ. ಚಾಸಾ-4 ರವರು ಅಲ್ಲಿಯ ಸ್ಥಳೀಯರಾಗಿರುತ್ತಾರೆ. ಆ ಸಮಯದಲ್ಲಿ ಮುಮಾ1 ರಿಂದ 4 ವಾಹನ ಮತ್ತು ಸ್ಥಳದಲ್ಲಿ ಸಿಕ್ಕಿರುವುದಿಲ್ಲ.

ಮರಳನ್ನು ತೆಗೆಯುವಾಗ ನೋಡಿದ ಸಾಕ್ಷಿದಾರರಾದ ಚಾಸಾ-2ರವರು ಇದ್ದರು. ಆತ ಬೆಳಗ್ಗೆ ತನ್ನ ಕರ್ತವ್ಯಕ್ಕೆ ಹೋಗುತ್ತಿದ್ದಾಗ ಕೃತ್ಯವನ್ನು ನೋಡಿರುತ್ತಾರೆ. ಆತನ ಮನೆಯಿಂದ ಘಟನಾ ಸ್ಥಳ ಕಂಡು ಬರುವುದಿಲ್ಲ. ಆರೋಪಿ ನ್ಯಾಯಾಲಯದ ನಿರೀಕ್ಷಣಾ ಜಾಮೀನಿನ ಮೇಲೆ ಠಾಣೆಗೆ 25 ದಿನಗಳ ನಂತರ ಹಾಜರಾದಾಗ ಆತನ ಹೇಳಿಕೆಯನ್ವಯ ಆತ ತೋರಿಸಿದ ಜಾಗದಲ್ಲಿ ಪಂಚನಾಮೆ ಜರುಗಿಸಿರುತ್ತೇನೆ. ಸದ್ರಿ ಪಂಚನಾಮೆಗೆ ಹಾಜರಾಗಿದ್ದ ಚಾಸಾ-5 ಮತ್ತು 6ರವರು ಇಬ್ಬರು ವಡೇರಹೋಬಳಿ ಕುಂದಾಪುರದವರಾಗಿರುತ್ತಾರೆ. ಅಲ್ಲಿಂದ ಘಟನಾ ಸ್ಥಳ 2 ಕಿ.ಮೀ ದೂರದಲ್ಲಿರುತ್ತದೆ. ನಾನು ನಿಪಿ-2ರ ಪಂಚನಾಮೆ ಬರೆಯುವ ಮೊದಲು 200 ಮೀಟರ್ ದೂರದಲ್ಲಿ ಮರಳು ತೆಗೆಯಲಾದ ಜಾಗವನ್ನು ನಮೂದು ಮಾಡಿಲ್ಲ ಆದರೆ ಖಚಿತಪಡಿಸಿಕೊಂಡಿರುತ್ತೇವೆ.

ನಾನು ಪಂಚನಾಮೆಗಳನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ವಾಹನದಲ್ಲಿ ಇದ್ದ ಮರಳನ್ನು ಹಿರಿಯ ಭೂ ವಿಜ್ಞಾನಿ ಉಡುಪಿ ಜಿಲ್ಲೆ ರವರಿಗೆ ಸಲ್ಲಿಸಿ ವರದಿಯನ್ನು ಪಡೆದಿರುತ್ತೇನೆ. ಯಾವುದೇ ರಾಸಾಯನಿಕ ವಿಶ್ಲೇಷಣೆಗೆ ಮರಳನ್ನು ಒಳಪಡಿಸಿಲ್ಲ. ಎಂ ಎಂ ಆರ್ ಡಿಯ ಕಲಂನ್ನು ಹಾಕಬಾರದೆಂದು ಯಾವುದೇ ಮಾರ್ಗಸೂಚಿ ಇಲ್ಲ. ಪ್ರಕರಣವನ್ನು ದೊಡ್ಡದು ಎಂದು ತೋರಿಸಲು ಎಂ ಎಂ ಆರ್ ಡಿ ಪ್ರಕರಣವನ್ನು ಕಾಯಿದೆ ಅಡಿಯಲ್ಲಿ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದ್ರಿ ಕಾಯಿದೆಯಡಿ ಪೊಲೀಸ್ ಅಧಿಕಾರಿಯವರಿಗೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಅವಕಾಶ ಇಲ್ಲ. ಎಂ ಎಂ ಆರ್ ಡಿಯ ಅಡಿಯಲ್ಲಿ ಯಾವುದೇ ಸಕ್ಷಮ ಅಧಿಕಾರದ ಅಧಿಕಾರಿ ತನಿಖೆ ಮಾಡಿಲ್ಲ.

ನಾವು ವಿನಾಃ ಕಾರಣ ಆರೋಪಿಯ ಮನೆಯಲ್ಲಿ ಇದ್ದ 407 ಟೆಂಪೋ ವಾಹನವನ್ನು ವಶಕ್ಕೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಎಂದಿಗೂ ಸದ್ರಿ ವಾಹನದಲ್ಲಿ ಮರಳು ಸಾಗಟವಾಗಿಲ್ಲ ಎಂದರೆ ಸರಿಯಲ್ಲ. ನಿಪಿ-2ರಲ್ಲಿ ಕಾಣಿಸಿರುವ ಸ್ಥಳದಲ್ಲಿ ಮರಳನ್ನು ಅಕ್ರಮವಾಗಿ ತೆಗೆಯಲಾಗಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಯಾವುದೇ ಪ್ರಕರಣ ನಡೆಯದೆ ಇದ್ದರೂ ಆರೋಪಿಯನ್ನು ಸಿಕ್ಕಿಸಿಲು ಪ್ರಯತ್ನಿಸಿದ ಕಾರಣ ಆತ ನಿರೀಕ್ಷಣಾ ಜಾಮೀನನ್ನು ಪಡೆಯಬೇಕಾಯಿತು ಎಂದರೆ ಸರಿಯಲ್ಲ. ಮುಮಾ1 ರಿಂದ 4ನ್ನು ಈ ಪ್ರಕರಣಕ್ಕೆ ನಾನೇ ಅಳವಡಿಸಿದ್ದು ಆರೋಪಿಯಿಂದ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮುಮಾ1 ರಿಂದ 4ಕ್ಕೂ ಯಾವುದೇ ಸಂಬಂಧವಿಲ್ಲದೆ ಆತ ಅದನ್ನು ಎಂದಿಗೂ ಸ್ವಾಧೀನ ಹೊಂದಿ ಬಳಸಿಲ್ಲ ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ವಶಕ್ಕೆ ಪಡೆದ ಮರಳು ನಿಶೇಧಕ್ಕೆ ಒಳಗಾದ ಮರಳು ಅಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಜರುಗಿಸಿದ ಸ್ಥಳದಲ್ಲಿ ಮರಳು ತೆಗೆಯುವುದು ನಿಶೇಧಿಸಿಲ್ಪಟ್ಟಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರುಪಡಿಸಿದ ಸುತ್ತೋಲೆಗೂ ತಕ್ಷೀರಿಗೂ ಯಾವುದೇ ಸಂಬಂಧವಿಲ್ಲ

ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನೇ ದೂರುದಾರನಾದ ಕಾರಣ ವಿಶೇಷ ಕಾಳಜಿಯಿಂದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರನ್ನು ಪ್ರಶ್ನಿಸಿ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಸಾಕ್ಷ್ಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**